# ಸರಮಾ

## ವೀರಯೋಧ ಗಾಯಕಿ

ಮೂಲ : ‘Swami Vivekananda: The Great Inspirer’, ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

**ಸ್ವಾ**ಮಿ ವಿವೇಕಾನಂದರು ದಕ್ಷಿಣಭಾರತದಲ್ಲಿ ಸಂಚರಿಸುತ್ತಿದ್ದಾಗ ಮನ್ಮಥನಾಥ ಭಟ್ಟಾಚಾರ್ಯರ ಪರಿಚಯವಾಗಿತ್ತು. ಅವರೊಡನೆ ಸ್ವಾಮೀಜಿ ಕನ್ಯಾಕುಮಾರಿಗೂ ಭೇಟಿಯಿತ್ತಿದ್ದರು. ಆ ಜಗನ್ಮಾತೆಯನ್ನು ಕುಮಾರಿಯ ರೂಪದಲ್ಲಿ ಪೂಜಿಸಿದ ನಂತರ ಸ್ವಾಮೀಜಿ ಭಟ್ಟಾಚಾರ್ಯರ ಪುಟ್ಟ ಮಗಳು ಸರಮಾಳನ್ನು ಜಗನ್ಮಾತೆಯಂತೆ ಪೂಜಿಸಿದರು.



ಮನ್ಮಥನಾಥನ ಮನೆಯಲ್ಲಿ ತಂಗಿದ್ದಾಗ ಸುತ್ತಮುತ್ತಲಿನ ಜನರೆಲ್ಲರೂ ಸ್ವಾಮೀಜಿಯವರನ್ನು ಸುತ್ತುವರಿಯುತ್ತಿದ್ದರು. ಅವರ ಮಾತುಗಳನ್ನು ಕೇಳುತ್ತಾ ಮೈಮರೆತ ಭಕ್ತರಿಗೆ ಮಧ್ಯ ರಾತ್ರಿ ಸರಿದ ಅರಿವೇ ಇರುತ್ತಿರಲಿಲ್ಲ! ಸಮಯ ಸಿಕ್ಕಾಗಲೆಲ್ಲಾ ಸ್ವಾಮೀಜಿ ಸರಮಾಳಿಗೆ ಹಾಡುಗಳನ್ನು ಹೇಳಿಕೊಡುತ್ತಿದ್ದರು, ಕೆಲವೊಮ್ಮೆ ಹಾರ್ಮೋನಿಯಂ ನುಡಿಸುವುದು ಹೇಗೆಂದು ತೋರಿಸುತ್ತಿದ್ದರು. ಇನ್ನು ಕೆಲವೊಮ್ಮೆ ಅವಳೊಡನೆ ಆಟವಾಡುತ್ತ, ಹಾಸ್ಯ, ಚಟಾಕಿ ಹಾರಿಸಿ ನಕ್ಕುನಗಿಸುತ್ತಾ, ರೋಮಾಂಚಕಾರಿ ಭೂತದ ಕಥೆಗಳನ್ನು ಹೇಳುತ್ತಾ ಕಾಲ ಕಳೆಯುತ್ತಿದ್ದರು. ತಪ್ಪು ಹೆಜ್ಜೆಗಳನ್ನು ಇಡುತ್ತಾ ಅವಳು ತಮ್ಮ ಬಳಿಗೆ ಬಂದಾಗ ಅವಳನ್ನು ತೊಡೆಯ ಮೇಲೆ ಕೂಡಿಸಿಕೊಂಡು ಗುರು ನಾನಕ್ ರಚಿಸಿದ ಪಂಜಾಬಿ ಹಾಡುಗಳನ್ನು ಹಾಡುತ್ತಿದ್ದರು. ಈ ಸುಂದರ ದೃಶ್ಯವನ್ನು ವೀಕ್ಷಿಸುವುದೇ ನಯನ ಮನೋಹರ ಎಂಬುದಾಗಿ ಭಕ್ತರೊಬ್ಬರು ಬರೆಯುತ್ತಾರೆ. ಅವರ ಮನೆಯಿಂದ ನಿರ್ಗಮಿಸುವಾಗ ಸ್ವಾಮೀಜಿ ತಮ್ಮ ಹಾಡಿನ ಪುಸ್ತಿಕೆಯನ್ನು ಸರಮಾಳಿಗೆ ಕಾಣಿಕೆಯಾಗಿ ಕೊಟ್ಟರು.

‘‘ಸಾರಿ, ಎಂದೂ ಧೈರ್ಯಗೆಡಬೇಡ. ಯುದ್ಧಕ್ಕೆ ಹೋಗುವ ಯೋಧನಂತೆ ಸದಾ ಸಿದ್ಧವಾಗಿರು. ನೋವು, ದುಃಖಗಳೆಲ್ಲಾ ದಿನ ನಿತ್ಯದ ವ್ಯಾಪಾರ ಈ ಪ್ರಪಂಚದಲ್ಲಿ. ಅವನ್ನು ನಗುನಗುತ್ತಾ ಸ್ವಾಗತಿಸು’’ ಎಂದು ಸ್ವಾಮೀಜಿ ಆ ಬಾಲಕಿಗೆ ಆಗಾಗ್ಗೆ ಹೇಳುತ್ತಿದ್ದರು. ಆ ದಿನಗಳಲ್ಲಿ ಈ ಮಾತುಗಳ ಅಂತರಾಳವನ್ನು ಅರಿಯುವ ಪ್ರಬುದ್ಧತೆ ಇರಲಿಲ್ಲ ಸರಮಾಳಲ್ಲಿ. ಆದರೆ ಮುಂದೆ ಆಕೆ ಜೀವನದಲ್ಲಿ ಅನೇಕ ಕಷ್ಟನಷ್ಟಗಳನ್ನು, ಸಂಕಟ, ದುಃಖ, ನೋವುಗಳನ್ನು ಅನುಭವಿಸಬೇಕಾಯಿತು. ತನ್ನ ತಂದೆ, ತಾಯಿ, ಪತಿ, ಅಳಿಯ, ಮಗಳು ಹಾಗೂ ಇನ್ನಿತರ ಹತ್ತಿರದ ಸಂಬಂಧಿಗಳು ಇಹಲೋಕ ತ್ಯಜಿಸಿದರು. ಇಂತಹ ದಾರುಣ ವ್ಯಥೆಯನ್ನು ಸಮಚಿತ್ತತೆಯಿಂದ ಎದುರಿಸಿದ ಸರಮಾ, ‘‘ನನ್ನ ಜೀವನದ ಸಂಕಷ್ಟಗಳನ್ನೆಲ್ಲಾ ಎದುರಿಸುವ ಶಕ್ತಿ ಸ್ವಾಮೀಜಿಯವರ ಆಶೀರ್ವಾದದಿಂದಲೇ ದೊರೆತದ್ದು’’ ಎನ್ನುತ್ತಾ ಭಾವಪರವಶಳಾಗುತ್ತಿದ್ದಳು.

ಅವಳ ಭವಿಷ್ಯವನ್ನು ತಮ್ಮ ದಿವ್ಯಚಕ್ಷುಗಳಿಂದ ಮೊದಲೇ ಕಂಡ ಸ್ವಾಮೀಜಿ ಆ ಬಾಲಕಿಗೆ ಮುನ್ಸೂಚನೆಯ ಮೂಲಕ ಶಕ್ತಿ ತುಂಬಿದರೆ?

‘‘ವಿಶ್ವದಲ್ಲಿ ಒಂದು ಅದ್ಭುತ ಸಮತೋಲನವನ್ನು ನೋಡುತ್ತೇವೆ. ಸ್ತ್ರೀಗೆ ಸಾಹಸ ಮಾಡಲು ಆಗದಿದ್ದರೆ ಪುರುಷನಿಗೆ ಸ್ತ್ರೀಯಷ್ಟು ಕಷ್ಟ ಸಹಿಸುವುದಕ್ಕೆ ಆಗುವುದಿಲ್ಲ.’’ ✷

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ. ೬, ಪು. ೧೭೩)*



**ಕನ್ಯಾಕುಮಾರಿ ದೇವಾಲಯ**